

بِسْمِ اللَّهِ الرَّحْمَنِ الرَّحِيم

# ವಕ್ಫೇ ಜದೀದ್ 60ನೇ ವರ್ಷ ಪ್ರಾರಂಭ – 2017

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06–01–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಲೋಕದಲ್ಲಿ ಮನುಷ್ಯರು ಹಣವನ್ನು ಖರ್ಚು ಮಾಡುತ್ತಾರೆ. ತಮ್ಮ ವೈಯಕ್ತಿಕ ಸುಖಕ್ಕಾಗಿ, ತಮ್ಮ ವೈಯಕ್ತಿಕ ಉದ್ದೇಶಲಕ್ಷ್ಯಗಳನ್ನು ಗಳಿಸಲಿಕ್ಕಾಗಿ ಮತ್ತು ಕೆಲವು ಸಾರಿ ದಾನಧರ್ಮದ ರೂಪದಲ್ಲಿಯೂ ಹಣವನ್ನು ಖರ್ಚು ಮಾಡುತ್ತಾರೆ. ಆದರೆ ಲೋಕದಲ್ಲಿ, ಲೋಕದ ಪ್ರತಿಯೊಂದು ನಗರದಲ್ಲಿ, ಪ್ರತಿಯೊಂದು ದೇಶದಲ್ಲಿ, ಒಂದು ಉದ್ದೇಶಕ್ಕೋಸ್ಕರ, ಒಂದು ಜಮಾಅತಿನ ಜನರು ಒಂದು ಕೈಕೆಳಗೆ ಜಮಾಯಿಸಿ ತಮ್ಮ ಸಂಪತ್ತನ್ನು ಖರ್ಚು ಮಾಡಲು ನೀಡುತ್ತಿದ್ದಾರೆ. ಮತ್ತು ಅವರ ಉದ್ದೇಶ ಧರ್ಮದ ಪ್ರಚಾರ ಮತ್ತು ಸೃಷ್ಟಿಗಳ ಸೇವೆಯಾಗಿದೆ. ಇಂತಹ ಬೇರೆ ಒಂದು ಗುಂಪಾಗಲಿ ಜಮಾಅತಾಗಲಿ ಲೋಕದಲ್ಲಿ ಇಲ್ಲ. ಕೇವಲ ಒಂದೇ ಒಂದು ಜಮಾಅತ್ ಈ ಕೆಲಸ ಮಾಡುತ್ತಾ ಇದೆ. ಆ ಜಮಾಅತನ್ನು ಅಲ್ಲಾಹನೇ ಈ ಉದ್ದೇಶ ಲಕ್ಷ್ಯಗಳನ್ನು ನೆರವೇರಿಸಲು ಸೃಷ್ಟಿಸಿದ್ದಾನೆ. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಸೇವಕನ ಜಮಾಅತ್ ಆಗಿದೆ. ಅದು ವಾಗ್ದತ್ತ ಮಹ್‌ದಿ ಮಸೀಹರ ಜಮಾಅತಾಗಿದೆ. ಲೋಕದಾದ್ಯಂತ ಇಸ್ಲಾಮ್ ಧರ್ಮವನ್ನು ಸ್ಥಾಪಿಸುವ ಕೆಲಸವನ್ನು ಅದಕ್ಕೆ ವಹಿಸಿಕೊಡಲಾಗಿದೆ. ಕಳೆದ 128 ವರ್ಷಗಳ ಕಾಲದಲ್ಲಿ ಇಸ್ಲಾಮಿನ ಸೇವೆಗೋಸ್ಕರ ಮತ್ತು ಮಾನವರ ಸೇವೆಗೋಸ್ಕರ ಈ ಜಮಾಅತ್ ತನ್ನ ಸಂಪತ್ತನ್ನು ಖರ್ಚು ಮಾಡುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಜಮಾಅತಿಗೆ ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಸಂಪತ್ತಿನ ಸರಿಯಾದ ವಿನಿಯೋಗದ ಬಗ್ಗೆ ಮತ್ತು ಬಲಿದಾನದ ಬಗ್ಗೆ ಸತ್ಯವಾದ ಜ್ಞಾನವನ್ನು ನೀಡಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಸ್ಥಳದಲ್ಲಿ ಹೇಳುತ್ತಾರೆ:

"ನೀವು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ ಎಂದು ನಾನು ಪದೇ ಪದೇ ಒತ್ತಿ ಹೇಳುತ್ತಿದ್ದೇನೆ. ಏಕೆಂದರೆ ಈಗ ಇಸ್ಲಾಮ್ ಅವನತಿಯ ಸ್ಥಿತಿಯಲ್ಲಿದೆ. ಬಾಹ್ಯ ಮತ್ತು ಆಂತರಿಕ ಬಲಹೀನತೆಗಳನ್ನು ನೋಡುವಾಗ ನನ್ನ ಮನಸ್ಸು ಆತಂಕಗೊಳ್ಳುತ್ತಿದೆ. ಇಸ್ಲಾಮ್ ಅನ್ಯ ವಿರೋಧಿ ಧರ್ಮಗಳಿಂದ ಬೇಟೆಯಾಡಲ್ಪಡುತ್ತಿದೆ. ಇಸ್ಲಾಮಿನ ಸ್ಥಿತಿ ಹೀಗಾಗುವಾಗ ಇಸ್ಲಾಮಿನ ಅಭಿವೃದ್ಧಿಗೋಸ್ಕರ ನಾವು ಹೆಜ್ಜೆ ಹಾಕುವುದು ಬೇಡವೇ? ಅಲ್ಲಾಹನು ಇದೇ ಉದ್ದೇಶಕ್ಕೋಸ್ಕರ ಈ ಜಮಾಅತನ್ನು ಸ್ಥಾಪಿಸಿದ್ದಾನೆ. ಆದುದರಿಂದ ಈ ಜಮಾಅತಿನ ಅಭಿವೃದ್ಧಿಗೋಸ್ಕರ ಪ್ರಯತ್ನ ಮಾಡುವುದೆಂದರೆ ಅದು ಅಲ್ಲಾಹನ ಆಜ್ಞೆ ಮತ್ತು ಇಚ್ಛೆಯನ್ನು ಈಡೇರಿಸುವುದಾಗಿದೆ."

"ಅಲ್ಲಾಹನು ವಾಗ್ದಾನ ನೀಡಿದ್ದಾನೆ. ಒಬ್ಬನು ಅಲ್ಲಾಹನಿಗೋಸ್ಕರ ಕೊಟ್ಟರೆ ಅವನಿಗೆ ಅನೇಕ ಪಟ್ಟು ಅನುಗ್ರಹ ದೊರಕುವುದು. ಅಂತಹ ವ್ಯಕ್ತಿಗೆ ಇಹಲೋಕದಲ್ಲಿ ಬಹಳ ಅನುಗ್ರಹ ಲಭಿಸುವುದು. ಮೃತನಾದ ನಂತರ ಅವನು ಪರಲೋಕದ ಪ್ರತಿಫಲ ಸಹ ನೋಡುವನು. ಅವನಿಗೆ ಎಷ್ಟು ಸುಖ ಲಭಿಸಿದೆ ಎಂದು ಕಾಣುವನು. ಆದುದರಿಂದ ನಾನು ಈಗ ನಿಮಗೆಲ್ಲರಿಗೂ ತಿಳಿಸುವುದೇನೆಂದರೆ ನೀವು ಇಸ್ಲಾಮಿನ ಅಭಿವೃದ್ಧಿಗೋಸ್ಕರ ನಿಮ್ಮ ಸಂಪತ್ತನ್ನು ಖರ್ಚು ಮಾಡಿರಿ." ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರು ಈ ಮಾತುಗಳನ್ನು ಮನವರಿಕೆ ಮಾಡಿದರು. ಮತ್ತು ತಮ್ಮ ಸಂಪತ್ತನ್ನು ಧಾರ್ಮಿಕ ಉದ್ದೇಶಲಕ್ಷ್ಯಕ್ಕೋಸ್ಕರ ನೀಡಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಗ್ರಂಥಗಳಲ್ಲೂ ಮಲ್‌ಫೂಝಾತ್‌ಗಳಲ್ಲೂ ಅನೇಕ ಜನರ ಉದಾಹರಣೆ ವಿವರಿಸಿದ್ದಾರೆ. ಆ ಜನರು ತಮ್ಮ ವೈಯಕ್ತಿಕ ಆವಶ್ಯಕತೆಗಳನ್ನು ನಿರ್ಲಕ್ಷಿಸಿ ಧಾರ್ಮಿಕ ಕಾರ್ಯಗಳಿಗೋಸ್ಕರ ಹೆಚ್ಚು ಹೆಚ್ಚಾಗಿ ತ್ಯಾಗಗಳನ್ನು ಮಾಡಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನ ಜನರಿಗೆ ತ್ಯಾಗ ಮಾಡುವ ಎಂತಹ ಹುರುಪುಂಟಾಗಿದೆ ಎಂದರೆ ಒಂದು ಪೀಳಿಗೆಯ ನಂತರ ಇನ್ನೊಂದು ಪೀಳಿಗೆಯ ಜನರು ಆರ್ಥಿಕ ತ್ಯಾಗಗಳನ್ನು ಅರ್ಪಿಸುತ್ತಾ ಮುಂದುವರಿಯುತ್ತಿದ್ದಾರೆ. ದೂರ ದೇಶಗಳ ಜನರು, ಜಮಾಅತಿಗೆ ಅನಂತರ ಬಂದು ಸೇರಿದವರು, ಸೇರುತ್ತಾ ಇರುವವರು, ಈ ಹಿರಿಯರ ತ್ಯಾಗದ ವಿವರಣೆಗಳನ್ನು ಆಲಿಸುತ್ತಾರೆ. ಇಂತಿಂತಹ ಆವಶ್ಯಕತೆಗಳಿಗೋಸ್ಕರ ಧನತ್ಯಾಗದ ಆವಶ್ಯಕತೆ ಇದೆ ಎಂದು ಆಲಿಸುತ್ತಾರೆ. ಅಲ್ಲಾಹನ ವಚನಗಳನ್ನು ಆಲಿಸಿ ಬಲಿದಾನದ ಆತ್ಮವನ್ನು ಮನವರಿಕೆ ಮಾಡುತ್ತಾರೆ. ಇಂತಹ ಜನರು ಮಾಡುತ್ತಿರುವ ಆರ್ಥಿಕ ತ್ಯಾಗದ ಉದಾಹರಣೆಗಳನ್ನು ನೋಡುವಾಗ ಆಶ್ಚರ್ಯವಾಗುತ್ತದೆ. ಶ್ರೀಮಂತರಿಗಿಂತ ಹೆಚ್ಚಾಗಿ ಮಧ್ಯಮವರ್ಗದ ಜನರು ಮತ್ತು ಬಡ ಜನರು ಆರ್ಥಿಕ ತ್ಯಾಗದ ಆಶ್ಚರ್ಯಕರ ಉದಾಹರಣೆಗಳನ್ನು ತೋರಿಸುತ್ತಿದ್ದಾರೆ. ನಮ್ಮ ಸಾಮಾನ್ಯ ಮಟ್ಟದ ತ್ಯಾಗದಿಂದ ಏನು ವ್ಯತ್ಯಾಸ ಆಗಲಿದೆ ಎಂದು ಅವರು ಯೋಚಿಸುವುದಿಲ್ಲ. ಅವರು ಅಲ್ಲಾಹನು ಈ ಕೆಳಗಿನ ಪವಿತ್ರ ಖುರ್‌ಆನ್ ವಚನದಲ್ಲಿ ಹೇಳಿದುದನ್ನು ಮನವರಿಕೆ ಮಾಡಿಕೊಂಡಿದ್ದಾರೆ.

وَمَثَلُ الَّذِينَ يُنفِقُونَ أَمْوَالَهُمُ ابْتِغَاءَ مَرْضَاتِ اللَّهِ وَتَثْبِيتًا مِّنْ أَنفُسِهِمْ كَمَثَلِ جَنَّةٍ بِرَبْوَةٍ أَصَابَهَا وَابِلٌ فَآتَتْ أُكُلَهَا ضِعْفَيْنِ

فَإِن لَّمْ يُصِبْهَا وَابِلٌ فَطَلٌّ ۗ وَاللَّهُ بِمَا تَعْمَلُونَ بَصِيرٌ

**ವ ಮಸಲುಲ್ಲದೀನ ಯುನ್‌ಫಿಖೂನ ಅಮ್‌ವಾಲಹುಮುಬ್‌ತಿಗಾಅ ಮರಝಾತಿಲ್ಲಾಹಿ ವತಸ್‌ಬೀತನ್ ಮಿನ್ ಅನ್‌ಫುಸಿಹಿಮ್ ಕಮಸಲಿ ಜನ್ನತಿನ್ ಬಿರಬ್‌ವತಿನ್ ಅಸಾಬಹಾ ವಾಬಿಲುನ್ ಫಆತತ್ ಉಕುಲಹಾ ಝಿಅ್‌ಫೈನಿ ಫಇನ್‌ಲಮ್ ಯುಸಿಬ್‌ಹಾ ವಾಬಿಲುನ್ ಫತಲ್ಲುನ್; ವಲ್ಲಾಹು ಬಿಮಾ ತಅ್‌ಮಲೂನ ಬಸೀರ್.**

"ಅಲ್ಲಾಹನ ಪ್ರೀತಿಗಳಿಸಲಿಕ್ಕಾಗಿ ಮತ್ತು ತಮ್ಮ ಆತ್ಮಗಳನ್ನು ದೃಢಪಡಿಸಲಿಕ್ಕಾಗಿ ತಮ್ಮ ಧನವನ್ನು ವ್ಯಯಮಾಡುವವರ ಸ್ಥಿತಿ ಪೀಠಭೂಮಿಯ ಮೇಲಿರುವ ತೋಟದಂತೆ, ಅದರ ಮೇಲೆ ಭಾರೀ ಮಳೆ ಸುರಿದಾಗ ಇಮ್ಮಡಿ ಫಲಗಳು ಉತ್ಪಾದಿಸಲ್ಪಡುತ್ತವೆ. ಸಮೃದ್ಧವಾದ ಮಳೆ ಅದರ ಮೇಲೆ ಬೀಳದಿದ್ದರೆ ಲಘುವಾದ ಮಳೆ ಅದಕ್ಕೆ ಸಾಕಾಗುತ್ತದೆ. ನೀವು ಮಾಡುವುದೆನ್ನೆಲ್ಲ ಅಲ್ಲಾಹನು ಕಾಣುತ್ತಾನೆ." (ಪವಿತ್ರ ಖುರ್‌ಆನ್ 2:266)

ಬಡ ಜನರ ತ್ಯಾಗಗಳು ಲಘುವಾದ ಮಳೆ ಅಥವಾ ಮಂಜು ಹನಿಗಳ ಹಾಗಿದೆ. ಧರ್ಮದ ತೋಟಕ್ಕೆ ಅವರ ಸಾಮಾನ್ಯ ತ್ಯಾಗದಿಂದ ದೊರಕುವ ಆ ತೇವದ ಕಾರಣದಿಂದ ಅಲ್ಲಾಹನ ಅನುಗ್ರಹದಿಂದ ಅಸಂಖ್ಯಾತ ಫಲ ದೊರೆಯುವಂತೆ ಮಾಡುತ್ತದೆ. ನಾವು ನೋಡುತ್ತಾ ಇದ್ದೇವೆ, ನಾವು ಬಡ ಜಮಾಅತ್ ಆಗಿದ್ದರೂ ಲೋಕದ ಪ್ರತಿಯೊಂದು ಸ್ಥಳದಲ್ಲಿ ಇಸ್ಲಾಮಿನ ಪ್ರಚಾರ ಮತ್ತು ಸೃಷ್ಟಿಸೇವೆಯ ಕೆಲಸ ಮಾಡುತ್ತಿದ್ದೇವೆ. ನಮ್ಮ ಕೆಲಸಗಳಿಗೆ ಅಲ್ಲಾಹನು ಎಂತಹ ಅನುಗ್ರಹ ನೀಡುತ್ತಿದ್ದಾನೆಂದರೆ ಲೋಕದ ಜನರು ಆಶ್ಚರ್ಯ ಸೂಚಿಸುತ್ತಾರೆ– ಇಷ್ಟು ಸ್ವಲ್ಪ ಸಾಧನ ಸಂಪತ್ತಿನಿಂದ ನೀವು ಇಷ್ಟೆಲ್ಲಾ ಹೆಚ್ಚು ಕೆಲಸ ಹೇಗೆ ಮಾಡುತ್ತಿದ್ದೀರಿ ಎಂದು. ಹೀಗೆ ಸಂಭವಿಸುವುದು ಏಕೆಂದರೆ ಈ ಧನತ್ಯಾಗ ಮಾಡುವವರು ಎಂತಹ ಜನರೊಂದಿಗೆ ಸೇರಲು ಪ್ರಯತ್ನಿಸುತ್ತಾರೆಂದರೆ ಅವರ ಉದಾಹರಣೆ ಅಲ್ಲಾಹನು ಹೀಗೆ ನೀಡಿದ್ದಾನೆ:

**ಯುನ್‌ಫಿಖೂನ ಅಮ್‌ವಾಲಹುಮ್ ಇಬ್ತಿಗಾಅ ಮರ್‌ಝಾತಿಲ್ಲಾಹ್** 'ಅವರು ಅಲ್ಲಾಹನ ಪ್ರೀತಿಗಳಿಸಲಿಕ್ಕಾಗಿ ತಮ್ಮ ಧನವನ್ನು ವ್ಯಯಿಸುತ್ತಾರೆ' ಎಂದು. ಅಲ್ಲಾಹನ ಪ್ರೀತಿಯನ್ನು ಗಳಿಸುವುದು ಉದ್ದೇಶವಾಗಿದ್ದರೆ ಅದರಿಂದ ಫಲಗಳು ಸಹ ಬಹಳ ಹೆಚ್ಚು ಲಭಿಸುತ್ತವೆ. ಅಲ್ಲಾಹನು ಬಹಳ ಅನುಗ್ರಹ ಸುರಿಸುತ್ತಾನೆ. ನಾನು ಹೇಳಿದ ಹಾಗೆ, ಈ ಧನತ್ಯಾಗಗಳ ಉದಾಹರಣೆಗಳು ಈಗ ಸಹ ಇದೆ. ಅಸಂಖ್ಯಾತ ಉದಾಹರಣೆಗಳಿವೆ. ಅವುಗಳಲ್ಲಿ ಕೆಲವನ್ನು ನಿಮ್ಮ ಮುಂದಿರಿಸುತ್ತೇನೆ:

ಖಾದಿಯಾನಿನಿಂದ ಸಾವಿರಾರು ಮೈಲು ದೂರದಲ್ಲಿರುವ ಒಬ್ಬ ಬಾಲಿಕೆ ನೈಜ ಇಸ್ಲಾಮ್ ಆಗಿರುವ ಅಹ್ಮದಿಯ್ಯತ್‌ಗೆ ಪ್ರವೇಶಿಸಿದಾಗ ಅವಳ ಯೋಚನೆ ಹೇಗೆ ಬದಲಾಯಿಸಿತೆಂದು ನೋಡಿರಿ. ಆರ್ಥಿಕ ತ್ಯಾಗದ ಬಗ್ಗೆ ಅವಳು ಹೇಗೆ ಮನವರಿಕೆ ಮಾಡಿದ್ದಾಳೆ ಎಂಬುದರ ಬಗ್ಗೆ ಅವಳ ಮಾತಿನಲ್ಲೇ ಆಲಿಸಿರಿ. ಯುಗಾಂಡದ ಈ ಬಾಲಿಕೆ ಅವಿದ್ಯಾವಂತಳೇನೂ ಅಲ್ಲ. ಅವಳು ಯುನಿವರ್ಸಿಟಿಯ ವಿದ್ಯಾರ್ಥಿನಿಯಾಗಿದ್ದಾಳೆ. ಅವಳು ಹೇಳುತ್ತಾಳೆ: ಕಳೆದ ಜುಲಾಯಿ ತಿಂಗಳಲ್ಲಿ ಯುನಿವರ್ಸಿಟಿಯಲ್ಲಿ ಪ್ರವೇಶ ಪಡೆಯುವ ಮೊದಲು ನನಗೆ ಕೆಲವು ವಸ್ತುಗಳನ್ನು ಖರೀದಿಸಲಿಕ್ಕಿತ್ತು. ಆದರೆ ಅದಕ್ಕೋಸ್ಕರ ಹಣ ಸಾಕಷ್ಟಿರಲಿಲ್ಲ. ಆಗ ನನ್ನ ಚಂದ ಸಹ ಬಾಕಿಯಾಗಿತ್ತು. ಆಗ ನಾನು ಚಂದದ ಹಣವನ್ನು ಕೊಟ್ಟೆನು. ಅಲ್ಲಾಹನು ನನಗೆ ಸಹಾಯ ಮಾಡುವನೆಂದು ನನಗೆ ದೃಢವಿಶ್ವಾಸವಿತ್ತು. ನಾನು ಸಮಾಧಾನ ಚಿತ್ತಳಾಗಿ ಚಂದದ ಹಣ ಪಾವತಿಸಿದೆ. ಒಂದು ತಿಂಗಳ ನಂತರ, ಯುನಿವರ್ಸಿಟಿ ತರಗತಿಗಳು ಪ್ರಾರಂಭವಾಗಲು ಮೂರು ದಿನಗಳು ಬಾಕಿಯಾಗಿದ್ದಾಗ, ನನ್ನ ಒಬ್ಬ ಆಂಟಿ ನನ್ನ ತಾಯಿಗೆ ಫೋನ್ ಮಾಡಿ ಕೇಳಿದರು: ನಾನು ಯುನಿವರ್ಸಿಟಿಗೆ ಹೋಗುವುದು ಯಾವಾಗ ಎಂದು. ಅವರು ನನ್ನನ್ನು ತನ್ನ ಮನೆಗೆ ಕರೆದರು. ನಾನು ಸಂಜೆ ಅವರ ಮನೆಗೆ ಹೋದಾಗ ಅವರು ನನಗೆ ಸ್ವಲ್ಪ ಹಣ ಕೊಟ್ಟರು. ಅದು ಯುನಿವರ್ಸಿಟಿಯಲ್ಲಿ ನನಗೆ ಆವಶ್ಯವಿರುವುದಕ್ಕಿಂತ ಅನೇಕಪಟ್ಟು ಹೆಚ್ಚಿಗೆ ಇತ್ತು. ಅದು ನಾನು ಚಂದ ಕೊಟ್ಟ ಹಣಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ಇತ್ತು. ಈ ರೀತಿ ಅಲ್ಲಾಹನು ನನ್ನ ಪ್ರಾರ್ಥನೆಗಳನ್ನು ಆಲಿಸಿದನು. ನಾನು ಎಲ್ಲಿಂದ ಸಹಾಯವನ್ನು ಪ್ರತೀಕ್ಷಿಸಿರಲಿಲ್ಲವೋ ಅಲ್ಲಿಂದ ನನಗೆ ಸಹಾಯ ದೊರಕುವಂತೆ ಮಾಡಿದನು.

ಇಂಡಿಯಾದ ಕೇರಳ ರಾಜ್ಯದ ಮಂಜೇರಿಯ ಓರ್ವ ವ್ಯಕ್ತಿಯ ಬಗ್ಗೆ ಅಲ್ಲಿನ ಇನ್ಸ್‌ಪೆಕ್ಟರ್ ಖಮರುದ್ದೀನ್ ಸಾಹಿಬ್ ಬರೆಯುತ್ತಾರೆ: ಅವರು ವ್ಯಾಕ್ಸೀನ್‌ಗೆ ಸಂಬಂಧಿಸಿದ ವ್ಯಾಪಾರ ಮಾಡುತ್ತಾರೆ. ನಾನು ಅವರ ಬಳಿಗೆ ಚಂದ ವಕ್‌ಫೇ ಜದೀದ್ ವಸೂಲು ಮಾಡಲು ಹೋದಾಗ ಹೇಳಿದರು: 'ನನ್ನ ಬಹಳ ಹಣ ವಸೂಲಿಯಾಗದೆ ಬಾಕಿಯಿದೆ. ಆದುದರಿಂದ ಬಹಳ ಕಷ್ಟವಿದೆ' ಎಂದು ಹೇಳುತ್ತಾ ಅವರು ಒಂದು ದೊಡ್ಡ ಸಂಖ್ಯೆಯ ಚೆಕ್ ಬರೆದು ಕೊಟ್ಟು ಹೇಳಿದರು– ಈಗ ನನ್ನ ಬ್ಯಾಂಕ್ ಎಕೌಂಟ್‌ನಲ್ಲಿ ಇಷ್ಟು ಹಣವಿಲ್ಲ. ಆದರೆ ನಾನು ಬೇಗನೆ ಈ ಹಣ ಪಾವತಿಸುವಂತೆ ಪ್ರಾರ್ಥಿಸಿರಿ ಎಂದು ಹೇಳಿದರು. ಇನ್ಸ್‌ಪೆಕ್ಟರ್ ಹೇಳುತ್ತಾರೆ: ಮರುದಿನವೇ ನನಗೆ ಫೋನ್ ಬಂತು. 'ಅಲ್ಲಾಹನ ಅನುಗ್ರಹದಿಂದ ನನ್ನ ಬ್ಯಾಂಕ್ ಎಕೌಂಟ್‌ನಲ್ಲಿ ಸಾಕಷ್ಟು ಹಣ ಜಮೆಯಾಗಿದೆ. ಆದುದರಿಂದ ತಾವು ನಾನು ನೀಡಿದ ಚೆಕ್ ಕ್ಯಾಶ್ ಮಾಡಿಕೊಳ್ಳಿರಿ. ಚಂದವನ್ನು ಕೊಟ್ಟ ಕಾರಣದಿಂದ ಅಲ್ಲಾಹನು ಇಷ್ಟು ಬೇಗ ಈ ಅನುಗ್ರಹ ನೀಡಿರುವನು' ಎಂದು ಹೇಳಿದರು.

ಪೂರ್ವ ಆಫ್ರಿಕದ ದೇಶವಾದ ತಾಂಜಾನಿಯಾದ ಒಬ್ಬ ವಿಧವೆಯ ಕುರಿತು ಆ ದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ: ಓರಂಗಾ ಪಟ್ಟಣದ ಮುಅಲ್ಲಿಮ್ ಒಬ್ಬ ವಿಧವೆಯಾದ ಅಮೀನ ಎಂಬವರ ಮನೆಗೆ ವಕ್ಫೇ ಜದೀದ್ ಚಂದ ವಸೂಲಿಗೆ ಹೋದಾಗ ಆ ವಿಧವೆ ಬಹಳ ದುಃಖದಿಂದ ಹೇಳಿದರು: ಈಗ ನನ್ನ ಹತ್ತಿರ ಏನೂ ಇಲ್ಲ. ಎಲ್ಲಿಂದಾದರೂ ಹಣ ದೊರೆತರೆ ಕೂಡಲೆ ನಾನೇ ತಂದುಕೊಡುವೆನು ಎಂದು ಹೇಳಿದರು. ಆ ಮುಅಲ್ಲಿಮ್ ಮನೆಗೆ ತಲಪುವ ಮೊದಲೇ ಆ ಮಹಿಳೆ ಹತ್ತು ಸಾವಿರ ಶಿಲ್ಲಿಂಗ್ ಹಣವನ್ನು ತೆಗೆದುಕೊಂಡು ಬಂದು ಹೇಳಿದರು: ನನಗೆ ಎಲ್ಲಿಂದಲೋ ಈ ಹಣ ಬಂದಿತು. ನಾನು ಯೋಚಿಸಿದೆ ಮೊದಲು ಚಂದ ಕೊಡುವೆನು, ಅನಂತರ ನನ್ನ ಖರ್ಚು ಮಾಡುವೆನು. ಆಕೆ ಹೇಳಿದರು: ನನ್ನ ವಾಗ್ದಾನ ಇಪ್ಪತ್ತೈದು ಸಾವಿರ ಶಿಲ್ಲಿಂಗ್ ಆಗಿದೆ. ಉಳಿದ ಹದಿನೈದು ಸಾವಿರ ಶಿಲ್ಲಿಂಗ್ ನನಗೆ ಹಣ ದೊರೆತಾಗ ಕೊಡುವೆನು.

ಆಕೆ ಹತ್ತು ಮಿನಿಟುಗಳ ನಂತರ ಪುನಃ ಹಣ ತೆಗೆದುಕೊಂಡು ಬಂದರು. ಅವರು ಹೇಳಿದರು– ಅಲ್ಲಾಹನ ವರ್ತನೆ ನೋಡಿರಿ, ನಾನು ಹತ್ತು ಸಾವಿರ ಶಿಲ್ಲಿಂಗ್ ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಲು ಕೊಟ್ಟು ಮನೆಗೆ ತಲಪುವ ಮೊದಲೇ ಅಲ್ಲಾಹನು ನನಗೆ ಮೂವತ್ತೈದು ಸಾವಿರ

ಶಿಲ್ಲಿಂಗ್ ಕಳುಹಿಸಿದನು. ಅದರಿಂದ ಹದಿನೈದು ಸಾವಿರ ಶಿಲ್ಲಿಂಗ್ ಚಂದ ಕೊಟ್ಟ ನಂತರ ನನ್ನ ಬಳಿ ಈಗ ಇಪ್ಪತ್ತು ಸಾವಿರ ಶಿಲ್ಲಿಂಗ್ ಉಳಿದಿದೆ. ಇದು ಅಲ್ಲಾಹನ ವರದಾನವಾಗಿದೆ. ಚಂದದ ಅನುಗ್ರಹವಾಗಿದೆ ಎಂದು ಹೇಳಿದರು. ಆ ವಿಧವೆಯ ವಿಶ್ವಾಸ ಈರೀತಿ ವರ್ಧಿಸಿತು.

ಪಶ್ಚಿಮ ಆಫ್ರಿಕದ ಬೇನಿನ್ ದೇಶದ ಒಬ್ಬ ಅಹ್ಮದಿಯ ಉದಾಹರಣೆ ನೋಡಿರಿ. ಅವರು ಅಹ್ಮದಿಯಾಗಿ ಒಂದು ವರ್ಷವಾಗಿಲ್ಲ. ಆದರೆ ಅವರ ತ್ಯಾಗ ಮನೋಭಾವ ಹಳೆಯ ಅಹ್ಮದಿಯರಿಗೂ ಅನುಕರಣೀಯವಾಗಿದೆ. ಅಲ್ಲಿನ ಮುಬಲ್ಲಿಗ್ ಬರೆಯುತ್ತಾರೆ: ಮುಝುಫ್ಫರ್ ಸಾಹಿಬ್ ಎಂಬವರು ಹೊಸದಾಗಿ ಜಮಾಅತ್ ಸ್ಥಾಪಿತವಾದ ಡೆಕಾಂಬೆ ಗ್ರಾಮದ ನಿವಾಸಿಯಾಗಿದ್ದಾರೆ. ಇಲ್ಲಿನವರು ಮೀನು ಹಿಡಿದು ಜೀವಿಸುತ್ತಾರೆ. ಇಲ್ಲಿನವರೊಂದಿಗೆ ಚಂದದ ಬಗ್ಗೆ ಲೋಕಲ್ ಮಿಶನರಿ ಹೇಳಿದಾಗ ಮುಝುಫ್ಫರ್ ಸಾಹಿಬರು ಕೂಡಲೆ ಒಂದು ಸಾವಿರ ಫ್ರಾಂಕ್ ಹಣ ಚಂದ ಬರೆಸಿದರು. ಅವರು ಹೇಳಿದರು ನನ್ನ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಆದರೆ ನಾನು ಯಾವ ಜಮಾಅತ್‌ಗೆ ಸೇರಿರುವೆನೋ ಅದರ ಮೂಲಕ ಚಂದದ ಆವಶ್ಯ ಪ್ರಕಟವಾದಾಗ ನಾನು ಅದರಲ್ಲಿ ಸೇರದಿರಲು ಇಚ್ಛಿಸುವುದಿಲ್ಲ.

ಕಾಂಗೋ ಕನ್‌ಸಾಶಾದ ಮುಬಲ್ಲಿಗ್ ಶಾಹಿದ್ ಸಾಹಿಬ್ ಬರೆಯುತ್ತಾರೆ: ಒಬ್ಬ ಮಹಿಳೆ ಚಿಕ್ಕ ಪ್ರಮಾಣದಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಆಕೆ ಹೇಳಿದರು: ವರ್ಷದ ಆರಂಭದಲ್ಲಿ ದೇಶದ ಪರಿಸ್ಥಿತಿಯ ಕಾರಣ ನನ್ನ ವ್ಯಾಪಾರ ಲಾಭಕರವಾಗದು ಎಂದು ತೋರುತ್ತಿತ್ತು. ನಾನು ವರ್ಷದ ಆರಂಭದಲ್ಲಿ ವಕ್‌ಫೇ ಜದೀದ್ ಚಂದ ಕೊಟ್ಟೆನು. ಮತ್ತು ನಾನು ಯೋಚಿಸಿದೆನು. ಅಲ್ಲಾಹನೊಂದಿಗೆ ಮಾಡಿದ ವ್ಯಾಪಾರದಲ್ಲಿ ನಷ್ಟವಾಗಲಾರದು ಎಂದು. ಅಲ್ಲಾಹನ ಅನುಗ್ರಹದಿಂದ ನನಗೆ ವ್ಯಾಪಾರದಲ್ಲಿ ಲಾಭ ಲಭಿಸಿತು. ದೇಶದ ಪರಿಸ್ಥಿತಿ ಚೆನ್ನಾಗಿರದಿದ್ದರೂ ಯಾವುದೇ ನಷ್ಟ ಸಂಭವಿಸಲಿಲ್ಲ.

ಅಹ್ಮದಿಯರು ಮಾಡುವ ಈ ಧನತ್ಯಾಗ ಅನ್ಯರ ಮೇಲೆ ಸಹ ಪ್ರಭಾವ ಬೀರುತ್ತದೆ. ಅದು ಸಹ ತಬ್ಲೀಗ್‌ಗೆ ಮಾರ್ಗ ತೆರೆಯುತ್ತದೆ. ಬಾಂಗ್ಲಾದೇಶದ ಅಮೀರ್ ಸಾಹಿಬರು ಹೇಳುತ್ತಾರೆ: ಮೂರು ವ್ಯಕ್ತಿಗಳಿಗೆ ತಬ್ಲೀಗ್ ಮಾಡಲಾಗುತ್ತಿತ್ತು. ಸಾಕಷ್ಟು ತಬ್ಲೀಗ್ ಮಾಡಿದರೂ ಅವರು ಬೈಅತ್ ಮಾಡಲು ಸಿದ್ಧರಾಗಿರಲಿಲ್ಲ. ಕಳೆದ ಜುಮುಅದ ದಿನ ಈ ಮೂವರು ಮಸ್‌ಜಿದ್‌ಗೆ ಬಂದಿದ್ದರು. ಖುತ್‌ಬದ ಸಂದರ್ಭದಲ್ಲಿ ವಕ್‌ಫೇ ಜದೀದ್ ಚಂದದ ಬಗ್ಗೆ ಗಮನ ಹರಿಸಲಾಗಿತ್ತು. ಜುಮುಅ ನಮಾಝ್ ನಂತರ ಜನರು ಸರತಿಯ ಸಾಲಿನಲ್ಲಿ ನಿಂತು ಚಂದ ಕೊಡಲು ಪ್ರಾರಂಭಿಸಿದರು. ಆ ಮೂರು ಜನರು ಈ ದೃಶ್ಯ ಕಂಡಾಗ ಹೇಳಿದರು: ನಮ್ಮ ಮೌಲವಿಗಳು ಚಂದ ವಸೂಲು ಮಾಡಲು ಗಂಟಲು ಮತ್ತು ನಾಲಗೆ ಒಣಗಿ ಹೋಗುವಂತೆ ಭಾಷಣ ಮಾಡುತ್ತಾರೆ. ಆದರೆ ಜನರು ಚಂದ ಕೊಡುವುದಿಲ್ಲ. ಇಲ್ಲಿ ಒಂದು ಚಿಕ್ಕ ಪ್ರಕಟಣೆ ನೀಡಿದಾಗ ಜನರು ಚಂದ ನೀಡಲು ಸಾಲುಗಟ್ಟಿ ನಿಲ್ಲುತ್ತಾರೆ. ವಾಸ್ತವಿಕ ಇಸ್ಲಾಮೀ ಆತ್ಮ ಇದೇ ಆಗಿದೆ. ಆ ಮೂವರು ಈ ದೃಶ್ಯಕಂಡ ನಂತರ ಬೈಅತ್ ಮಾಡಿದರು ಮತ್ತು ವಕ್‌ಫೇ ಜದೀದ್ ಚಂದ ಸಹ ಕೊಟ್ಟರು.

(ಹಝ್ರತ್ ಖಲೀಫತುಲ್ ಮಸೀಹ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ವಿವಿಧ ದೇಶಗಳ ಅಹ್ಮದಿಯರು ಮಾಡಿದ ಆರ್ಥಿಕ ತ್ಯಾಗಗಳ ಬಗ್ಗೆ ಇನ್ನೂ ಕೆಲವು ಉದಾಹರಣೆಗಳನ್ನು ವಿವರಿಸಿದರು. ಅನಂತರ ಹೇಳಿದರು:)

ಹೊಸ ವರ್ಷದ ಪ್ರಥಮ ಜುಮುಅದ ದಿನ ವಕ್‌ಫೇ ಜದೀದ್ ಹೊಸ ವರ್ಷಾರಂಭವನ್ನು ಘೋಷಿಸಲಾಗುತ್ತದೆ. ಈಗ ನಾನು ವಕ್‌ಫೇ ಜದೀದಿನ ಅರುವತ್ತನೇ ವರ್ಷದ ಆರಂಭವನ್ನು ಘೋಷಿಸುತ್ತೇನೆ. ಹಿಂದಿನ ವರ್ಷ ಅಲ್ಲಾಹನು ನೀಡಿದ ಅನುಗ್ರಹಗಳ ಬಗ್ಗೆ ಸಹ ನಾನು ಪ್ರಸ್ತಾಪಿಸುವೆನು. **ವಕ್‌ಫೇ ಜದೀದ್** ವರ್ಷ ಡಿಸೆಂಬರ್ ದಿನಾಂಕ 31ಕ್ಕೆ ಕೊನೆಗೊಂಡಿತು. ಎಂದರೆ 59ನೇ ವರ್ಷ ಮುಕ್ತಾಯವಾಯಿತು. ದೊರೆತ ವರದಿಗಳ ಪ್ರಕಾರ ಲೋಕದ ವಿವಿಧ ಜಮಾಅತ್‌ಗಳು ಕಳೆದ ವರ್ಷ 80ಲಕ್ಷದ ಇಪ್ಪತ್ತು ಸಾವಿರ ಪೌಂಡ್ ಆರ್ಥಿಕ ತ್ಯಾಗ ಮಾಡಿವೆ. ಇದು ಅದರ ಹಿಂದಿನ ವರ್ಷದ ವಸೂಲಿಗಿಂತ ಹನ್ನೊಂದು ಲಕ್ಷದ ಇಪ್ಪತ್ತೊಂತ್ತು ಸಾವಿರ ಪೌಂಡ್‌ನಷ್ಟು ಹೆಚ್ಚಿಗೆ ಇದೆ. ಈ ಕಳೆದ ವರ್ಷ ಸಹ ಪಾಕಿಸ್ಥಾನದ ಜಮಾಅತ್‌ಗಳು ಲೋಕದ ಇತರ ದೇಶಗಳ ಜಮಾಅತ್‌ಗಳಿಗಿಂತ ವಸೂಲಿಯಲ್ಲಿ ಪ್ರಥಮ ಸ್ಥಾನದಲ್ಲಿದೆ.

ಪಾಕಿಸ್ಥಾನವನ್ನು ಹೊರತು ಪಡಿಸಿ, ಇತರ ದೇಶಗಳಲ್ಲಿ ಪ್ರಥಮ ಹತ್ತು ಸ್ಥಾನ ಪಡೆದ ದೇಶಗಳು ಇವುಗಳಾಗಿವೆ. ಒಂದು ಬ್ರಿಟನ್, ಎರಡು ಜರ್ಮನಿ, ಮೂರು ಅಮೇರಿಕ, ನಾಲ್ಕು ಕೆನಡ, ಐದು ಹಿಂದೂಸ್ಥಾನ, ಆರು ಆಸ್ಟ್ರೇಲಿಯಾ, ಏಳು ಮಧ್ಯಪೂರ್ವದ ಒಂದು ದೇಶ, ಎಂಟು ಇಂಡೋನೇಶಿಯಾ, ಒಂಬತ್ತು ಮದ್ಯಪೂರ್ವದ ಇನ್ನೊಂದು ದೇಶ, ಹಾಗೂ ಹತ್ತನೆಯ ಸ್ಥಾನದಲ್ಲಿ ಘಾನ ಇದೆ. ಅನಂತರ ಬೆಲ್‌ಜಿಯಂ ಮತ್ತು ಸ್ವಿಝರ್‌ಲೇಂಡ್ ಸ್ಥಾನ ಪಡೆದಿದೆ.

ತಲಾವಾರು ಚಂದ ನೀಡಿದ ಲೆಕ್ಕ ಪ್ರಕಾರ ಪ್ರಥಮ ಸ್ಥಾನದಲ್ಲಿ ಅಮೇರಿಕ ಇದೆ. ಅನಂತರ ಕ್ರಮಪ್ರಕಾರ ಸ್ವಿಝರ್‌ಲೇಂಡ್, ಫಿನ್‌ಲೇಂಡ್, ಆಸ್ಟ್ರೇಲಿಯಾ, ಸಿಂಗಾಪುರ, ಫ್ರಾನ್ಸ್, ಜರ್ಮನಿ, ಟ್ರಿನಿಡಾಡ್, ಬೆಲ್‌ಜಿಯಂ, ಮತ್ತು ಕೆನಡ. ಬ್ರಿಟನ್ ಪ್ರಥಮ ಸ್ಥಾನದಲ್ಲಿದ್ದರೂ ಪ್ರತಿವ್ಯಕ್ತಿ ಲೆಕ್ಕದಲ್ಲಿ ಹಿಂದೆ ಇದೆ.

ಅಲ್ಲಾಹನ ಅನುಗ್ರಹದಿಂದ ಈ ವರ್ಷ ವಕ್‌ಫೇ ಜದೀದ್ ಚಂದ ನೀಡಿದವರ ಸಂಖ್ಯೆ ಹದಿಮೂರು ಲಕ್ಷ ನಲ್ವತ್ತು ಸಾವಿರ ಆಗಿದೆ. ಕಳೆದ ವರ್ಷಕ್ಕಿಂತ ಒಂದು ಲಕ್ಷದ ಐದು ಸಾವಿರ ಜನರು ಹೆಚ್ಚಿಗೆ ವಕ್‌ಫೇ ಜದೀದ್ ಚಂದ ನೀಡುವವರಾದರು. ಚಂದ ನೀಡುವವರ ಸಂಖ್ಯೆ ವರ್ಧನೆಯ ದೃಷ್ಟಿಯಲ್ಲಿ ಮುಂಚೂಣಿಯಲ್ಲಿರುವ ದೇಶಗಳು ಇವುಗಳಾಗಿವೆ. ಕೆನಡ, ಹಿಂದೂಸ್ಥಾನ, ಬ್ರಿಟನ್, ಆಫ್ರಿಕದ ಗಿನಿಕನಾಕರಿ, ಕೆಮರೂನ್, ಗ್ಯಾಂಬಿಯಾ, ಸೆನೆಗಲ್, ಬೆನಿನ್, ನೈಜರ್, ಕೋಂಗೋ, ಕನ್‌ಸಾಶಾ, ಬುರ್ಕಿನಾ ಫಾಸೋ ಹಾಗೂ ತೆನ್‌ಝಾನಿಯಾ.

ಭಾರತದ ಹತ್ತು ರಾಜ್ಯಗಳು ಅನುಕ್ರಮವಾಗಿ ಹೀಗಿವೆ: ಪ್ರಥಮ ಸ್ಥಾನ ಕೇರಳ, ಅನಂತರ ಜಮ್ಮುಕಾಶ್ಮೀರ, ತಮಿಳುನಾಡು, ಕರ್ನಾಟಕ, ತೆಲಂಗಾಣ, ಒಡಿಶ, ಪಶ್ಚಿಮ ಬಂಗಾಳ, ಪಂಜಾಬ್, ಉತ್ತರ ಪ್ರದೇಶ, ದೆಹಲಿ ಹಾಗೂ ಅನಂತರದ ಸ್ಥಾನದಲ್ಲಿ ಮಹಾರಾಷ್ಟ್ರ ಇದೆ. ಭಾರತದ ಹತ್ತು ಜಮಾಅತ್‌ಗಳು ಹೀಗಿವೆ: ಪ್ರಥಮ ಸ್ಥಾನ ಕರುಳಾಯಿಗೆ. ಅನಂತರ ಅನುಕ್ರಮವಾಗಿ, ಕಾಲಿಕಟ್, ಹೈದರಾಬಾದ್,

ಪತ್ತಪಿರಿಯಂ, ಖಾದಿಯಾನ್, ಕಣ್ಣೂರ್ ಟೌನ್, ಕೊಲ್ಕತ್ತ, ಬೆಂಗಳೂರು, ಸೊಲೂರು ಪಯಂಗಾಡಿ.

ಅಲ್ಲಾಹನು ಆರ್ಥಿಕ ತ್ಯಾಗ ಮಾಡಿದ ಎಲ್ಲರಿಗೂ ಅವರ ಸಂಪತ್ತಿನಲ್ಲಿಯೂ ಜನಸಂಖ್ಯೆಯಲ್ಲಿಯೂ ಅಪರಿಮಿತ ಅನುಗ್ರಹ ಸುರಿಸುವವನಾಗಲಿ. ಹುದ್ದೇದಾರರು. ಇನ್ನಷ್ಟು ಸಕ್ರಿಯರಾಗುವಂತೆ ಅಲ್ಲಾಹನು ಮಾಡಲಿ. ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುವವರಾಗಲಿ. ಅವರು ತಮ್ಮ ಕೆಲಸದಲ್ಲಿ ಮಾಡಿದ ಕೊರತೆಗಳನ್ನು ನಿವಾರಿಸಲು ಪ್ರಯತ್ನಿಸುವವರಾಗಲಿ. ವಿಶಿಷ್ಟವಾಗಿ ಚಂದ ನೀಡುವವರ ಸಂಖ್ಯೆ ವರ್ಧಿಸಲು ಪ್ರಯತ್ನಿಸಬೇಕಾಗಿದೆ. ಚಂದ ನೀಡುವ ಹಣದ ಸಂಖ್ಯೆ ಕಡಿಮೆಯಾದರೂ ಪ್ರತಿಯೊಬ್ಬರನ್ನೂ ಚಂದ ನೀಡುವವರಲ್ಲಿ ಸೇರಿಸಲು ಪ್ರಯತ್ನಿಸಬೇಕಾಗಿದೆ.

(ಖುತ್‌ಬದ ಕೊನೆಗೆ ಹುಝೂರ್ ಹೇಳಿದರು:)

ನಮಾಝ್‌ಗಳ ನಂತರ ಇಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಪ್ರಥಮ ಜನಾಝ ಮುಕರ್ರಮ್ ಸಾಹಿಬ್ ಝಾದ ಮಿರ್ಝಾ ಖಲೀಲ್ ಅಹ್ಮದ್ ಸಾಹಿಬರ ಪತ್ನಿ ಮುಕರ್ರಮ ಅಸ್ಮಾ ತಾಹಿರ ಸಾಹಿಬರದಾಗಿದೆ. 23–12–2016ರಂದು ಕೆನಡದಲ್ಲಿ ಅವರು 79ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.

ಎರಡನೆಯ ಜನಾಝ ಮುಕರ್ರಮ್ ಚೌಧರಿ ಹಮೀದ್ ನಸ್ರುಲ್ಲಾ ಖಾನ್ ಸಾಹಿಬರದಾಗಿದೆ. 4–1–2017ರಂದು ಲಾಹೋರಿನಲ್ಲಿ 83ನೇ ವಯಸ್ಸಿನಲ್ಲಿ ಅವರು ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.

(ಈ ಇಬ್ಬರು ಹಿರಿಯರ ಸದ್ಗುಣಗಳನ್ನು ಹುಝೂರ್ ವಿವರಿಸಿದರು ಮತ್ತು ಹೀಗೆ ಪ್ರಾರ್ಥಿಸಿದರು:) ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ರಹ್‌ಮತ್ ನೀಡಲಿ. ಅವರ ಪದವಿ ಉನ್ನತಗೊಳಿಸಲಿ. ಅವರ ಮಕ್ಕಳು ಖಿಲಾಫತ್‌ನೊಂದಿಗೆ ಮತ್ತು ಜಮಾಅತ್‌ನೊಂದಿಗೆ ನಿಷ್ಠೆಯ ಸಂಬಂಧ ಸ್ಥಾಪಿಸುವವರಾಗಲಿ ಹಾಗೂ ಅವರ ಒಳಿತುಗಳನ್ನು ಜಾರಿಗೊಳಿಸುವವರಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At, Masjid Baithul Futhuh, London on 06-01-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon